ನನ್ನದು ಒಂಟಿ ದನಿ ಆದೀತು ಎಂದು ನಾನು ಕೂಡ ಸುಮ್ಮನಿದ್ದೆ. ಹೀಗಿರುವಾಗ ಊರಿನಲ್ಲಿ ಇರುವ ಮರಗಳ ಕುರಿತು ಚಿಂತಿಸುವ, ಯೋಚಿಸುವ ವ್ಯವಧಾನ ಇಲ್ಲದ ಜನ ಈ ಗುಲ್ ಮೊಹರ್ ಮರದ ಬಗ್ಗೆ ಯೋಚಿಸುತ್ತಿಲ್ಲ ಅನ್ನುವುದು ಅಂತಹ ಮುಖ್ಯ ವಿಷಯ ಅಲ್ಲ ಬಿಡಿ. ಆದರೆ ನಾನು ಈ ಬಗ್ಗೆ ಇಷ್ಟೆಲ್ಲ ಹೇಳಲು ಒಂದು ಕಾರಣ ಇದೆ.

ಹೋದ ಮೇ ತಿಂಗಳಿನಲ್ಲಿ ಈ ಮರದಲ್ಲಿ ಇಂದಿನಂತೆಯೇ ಹೂ ಅರಳಿತ್ತು. ದೂರದಿಂದ ಸೊಗಸಾಗಿ ಕಾಣುತ್ತಿದ್ದ ದೃಶ್ಯ ಅದು. ನಾನು ಎಂದಿನಂತೆ ವಾಕಿಂಗ್ ಬಂದವನು ಮರದ ಕೆಳಗಿನಿಂದ ಹಾದು ಹೋಗುವಾಗ ಆ ಮರವನ್ನ ಒಂದು ಬಾರಿ ಮುಟ್ಟಿ ಮನಸ್ಸಿನಲ್ಲಿಯೇ ಈ ಮರಕ್ಕೆ ನನ್ನ ಕೃತಜ್ಞತೆ ಅರ್ಪಿಸಿ, ಹಾಗೆಯೇ ತಲೆ ಎತ್ತಿ ಅದರಲ್ಲಿ ಒಂದು ವ್ಯವಸ್ಥೆಯಲ್ಲಿ ಅರಳಿರುವ ಕೆಂಪು ಹೂವನ್ನು ನಡುನಡುವೆ ಇರುವ ಹಸಿರು ಎಲೆಗಳನ್ನು, ಈ ಹೂವು ಎಲೆಯನ್ನ ಹೊತ್ತು ವಯ್ಯಾರದಿಂದ ಬಾಗಿ ನಿಂತ ಅದರ ರೆಂಬೆಯನ್ನು, ಈ ಮರ ಉಳಿದ ಮರಗಳಿಗಿಂತ ಭಿನ್ನವಾಗಿರುವುದನ್ನು, ಈ ಮರದಿಂದ ಆ ಪರಿಸರಕ್ಕೆ ಬಂದಿರುವ ಒಂದು ಸೊಬಗನ್ನು ನೋಡಿ ಮುಂದೆ ಹೋದೆ.

ಟ್ರ್ಯಾಕಿನಲ್ಲಿ ಒಂದು ಸುತ್ತು ಮುಗಿಸಿ ಮತ್ತೆ ನಾನಲ್ಲಿ ಬಂದಾಗ ಆ ಮರದ ಕೆಳಗಿನ ಕಟ್ಟೆಯ ಮೇಲೆ ಒಂದು ಜೋಡಿ ಕುಳಿತುಕೊಂಡಿತ್ತು. ಅದೇ ಮದುವೆಯಾದ ಹೊಸ ದಂಪತಿ ಅನ್ನುವುದು ಅವರಿಬ್ಬರ ಮುಖಗಳ ಮೇಲಿನ ಭಾವ ಹೇಳುತ್ತಿತ್ತು. ಆ ಹುಡುಗಿ ತಿಳಿ ಹಸಿರು ಬಣ್ಣದ ಸೀರೆ ಉಟ್ಟಿದ್ದಳು. ಈ ಸೀರೆಯ ಮೇಲೆ ತಿಳಿ ಕೆಂಪು ಬಣ್ಣದ ಹೂವುಗಳು ಇದ್ದವು. ಹುಡುಗ ನೀಲಿ ಸಫಾರಿಯಲ್ಲಿ ಅವಳ ಮಗ್ಗುಲಲ್ಲಿ ಅವಳಿಗೆ ಅಂಟಿಕೊಂಡು ಕುಳಿತಿದ್ದ. ನರಸಿಂಹ ಸ್ವಾಮಿಗಳು ತಮ್ಮ ಬಳೆಗಾರ ಕವನದಲ್ಲಿ ಹೇಳಿದ ಹಾಗೆ ನಾನು "ಕಣ್ತುಂಬ ನೋಡಿದೆನು, ಮುದುಕ".

ನನ್ನ ವಾಯು ವಿಹಾರ ಎಂದಿನಂತೆ ಮುಂದುವರೆಯಿತು. ಆ ಮರದ ಬಳಿ ಬಂದಾಗ ಇಲ್ಲವೇ ದೂರದಿಂದ ಆ ಮರದತ್ತ ಒಂದು ನೋಟ ಇರಿಸಿಕೊಂಡೇ ನಾನು ಬಂದೆ. ಮನಸ್ಸಿಗೆ ಮುದ ನೀಡುವಂತೆ ಇತ್ತು ಆ ಈರ್ವರ ವರ್ತನೆ. ಅದು ಸಹಜ. ಎಲ್ಲೋ ಬೆಳೆದ ಗಂಡು ಎಲ್ಲೋ ಬೆಳೆದ ಹೆಣ್ಣು ಹತ್ತಿರ ಹತ್ತಿರವಾಗುವಾಗ ನಾಚಿಕೆ, ಸಲಿಗೆ, ಕುತೂಹಲ, ಪ್ರೀತಿ, ಆಕರ್ಷಣೆ ಇತ್ಯಾದಿ ಎಲ್ಲ ಕೂಡಿ ಅವರ ವರ್ತನೆಗೆ ಒಂದು ಸೊಬಗನ್ನು ತಂದು ಕೊಡುತ್ತದೆ. ಗುಸುಗುಸು ನುಡಿ, ಪಿಸುಗುಡುವ ನಗೆ, ನಾಲಿಗೆಯ ತುದಿಯಲ್ಲಿಯೇ ಉಳಿದು ಬಿಡುವ ಮಾತು, ಸ್ಪರ್ಶಕ್ಕಾಗಿ ಹಾತೊರೆಯುವ ಮನಸ್ಸು, ಇವೆಲ್ಲ ದಾಂಪತ್ಯ ಜೀವನದ ಪ್ರಾರಂಭದ ಆಕರ್ಷಣೆಗಳು. ಇದು ನನ್ನಂತಹ ವಯಸ್ಸಾದವನಿಗೆ ಮುದ ನೀಡುವ ವಿಷಯವೂ ಹೌದು. ನಮಗೆ ಪ್ರಪಂಚವೆಲ್ಲ ಸುಂದರವಾಗಿರ ಬೇಕು. ಇಲ್ಲಿ ಬದುಕುವ ದಂಪತಿಗಳು ಅನ್ಯೋನ್ಯವಾಗಿರಬೇಕು. ಅಂದರೆ ನೆಮ್ಮದಿ.

ಅವರು ಹಾಗೆಯೇ ಇದ್ದರು. ಮರದಲ್ಲಿ ಕೆಂಪು ಹೂವಿರುವ ತನಕ ನಿತ್ಯ ಅವರು ಅಲ್ಲಿಗೆ ಬರುತ್ತಿದ್ದರು. ಮರದ ಕೆಳಗೆ ಕುಳಿತುಕೊಂಡು ಅವನ ಮುಖವನ್ನ ಇವಳು, ಇವಳ ಮುಖವನ್ನ ಅವನು ನೋಡುತ್ತ ನಗುತ್ತ, ಕೀಟಲೆ ಮಾಡುತ್ತ, ಕಿಲಕಿಲ ನಗುತ್ತ ಇದ್ದರು. ಆ ಒಂಟಿ ಮರಕ್ಕೆ ಈ ಜೋಡಿ ಅದೆಷ್ಟು ಹೊಂದಿಕೊಂಡಿತ್ತು ಅಂದರೆ ಇದು ಆ ಮರದ ಒಂದು ಭಾಗವೇ ಎಂದು ಜನ ತಿಳಿಯತೊಡಗಿದರು. ಅಲ್ಲದೆ ಈ ಜೋಡಿ ಕೆಲವೇ ದಿನಗಳಲ್ಲಿ ಅಲ್ಲಿ ವಾಕಿಂಗ್ ಮಾಡುವ ಎಲ್ಲರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾದರು. ಅಲ್ಲಿ ಹೋಗುವ ಎಲ್ಲರೂ ಆ ಮರದ ಕೆಳಗೆ ನಿಂತು ಅವರನ್ನ ಮಾತನಾಡಿಸಿಕೊಂಡು ಹೋಗುವುದು ಒಂದು ಅಭ್ಯಾಸವಾಯಿತು.

ಈ ನಡುವೆ ನನಗೆ ಈ ಇಬ್ಬರ ಪರಿಚಯವೂ ಆಯಿತು. ನನ್ನ ಜೊತೆಯಲ್ಲಿ ನಿತ್ಯ ವಿಹಾರ ಬರುತ್ತಿದ್ದ ರಾಯರು ಒಂದು ದಿನ ನನ್ನನ್ನ ನಿಲ್ಲಿಸಿಕೊಂಡು ಇವರ ವಿಷಯ ಹೇಳಿದರು. ಆ ಹುಡುಗ ಊರಿನ ಬ್ಯಾಂಕ್ ಮ್ಯಾನೇಜರರ ಮಗ ಎಂದರು. ಹುಡುಗಿ ಹಾಸನದವಳು. ಆದರೆ ಇಬ್ಬರೂ ಇರುವುದು ಬೆಂಗಳೂರಿನಲ್ಲಿ. ಒಂದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿಯೇ ಇವರಿಬ್ಬರ ನಡುವೆ ಪ್ರೀತಿ ಬೆಳೆದಿದೆ. ಮದುವೆ ಆಗಿದ್ದಾರೆ. ಈಗ ರಜೆಗೆ ಹುಡುಗ ತನ್ನ ಮನೆಗೆ ಹೆಂಡತಿಯನ್ನ ಕರೆತಂದಿದ್ದಾನೆ. ಎಂದೆಲ್ಲ ಹೇಳಿ ತುಸು ತಡೆದು 'ಹುಡುಗನದೊಂದು ಜಾತಿ ಹುಡುಗಿಯದೊಂದು ಜಾತಿ. ಹುಡುಗಿಯ ಕಡೆಯವರಿಗೆ ಈ ಮದುವೆ ಒಪ್ಪಿಗೆ

ಆಗಿಲ್ಲ. ಆದರೂ ಇವರು ಮದುವೆಯಾಗಿದ್ದಾರೆ' ಎಂದರು.

ಈ ಜಾತಿ ಇತ್ಯಾದಿಗಳ ಬಗ್ಗೆ ಅಷ್ಟೊಂದು ಪ್ರಾಮುಖ್ಯತೆ ನೀಡದ ನಾನು 'ಇರಲಿ ಬಿಡಿ, ಪರಸ್ಪರ ಅರ್ಥ ಮಾಡಿಕೊಂಡು ಇರುವುದು ಮುಖ್ಯ. ಜಾತಿ ತೊಕೊಂಡು ಏನು ಮಾಡುತ್ತೀರಾ ?' ಎಂದಿದ್ದೆ. ಈ ಮಾತು ಹೇಳುವಾಗ ನನಗೆ ನೆನಪಾದದ್ದು ಈ ಗುಲ್ ಮೊಹರ್. ಯಾವುದೋ ದೇಶದ ಮರ ಇಲ್ಲಿ ಹೂ ಬಿಟ್ಟು ಬೆಳೆಯುತ್ತಿಲ್ಲವೆ? ಹಾಗೆಯೇ ಮನುಷ್ಯ ತನ್ನ ಮಾನವೀಯ ಗುಣಗಳನ್ನ ಇರಿಸಿಕೊಂಡು ಪರಸ್ಪರ ಪ್ರೀತಿಸುತ್ತ ಗೌರವಿಸುತ್ತ ಬೆಳೆಯುತ್ತಾನೆ, ಬೆಳೆಯ ಬೇಕು ಅಲ್ಲವೆ? ಎಂಬ ವಿಚಾರ ನನ್ನ ಮನಸ್ಸಿನಲ್ಲಿ ಬಂದು ಹೋಗದಿರಲಿಲ್ಲ. ಮರದಲ್ಲಿ ಕೆಂಪು ಹೂ ಮಾಯವಾಯಿತು ಅನ್ನುವಾಗ ಆ ಜೋಡಿ ಬರುವುದನ್ನು ನಿಲ್ಲಿಸಿತು. ಅವರ ರಜೆ ಮುಗಿದು ಅವರು ಬೆಂಗಳೂರಿಗೆ ಹಿಂತಿರುಗಿದರು ಎಂದು ರಾಯರು ಒಂದು ದಿನ ಹೇಳಿದರು.

'ಅಲ್ಲೂ ಲಾಲ್‌ಬಾಗಿನಲ್ಲಿ ಈ ಕೆಂಪು ಹೂವಿನ ಮರಗಳು ಇವೆ. ಅಲ್ಲಿ ಅವರು ನೆಮ್ಮದಿಯಿಂದ ಇರಲಿ ಬಿಡಿ' ಎಂದೆ. ಆಗ ನನಗೆ ನೆನಪಾದದ್ದು ಲಾಲ್ ಬಾಗಿನ ಬಾಗಿಲಲ್ಲಿ ಬರೆದು ತೂಗು ಹಾಕಿರುವ ಆ ಫಲಕ 'ಕೆಂಪು ಹೂ ದಾರಿಯಲಿ ನಡೆನಡೆದು, ಕೆಂಪು ತೋಟಕೆ ಬನ್ನಿ ವಿಶ್ರಾಂತಿಗೆ'. ಆದರೆ ಕೆಲ ದಿನಗಳ ನಂತರ ಬಂದ ಒಂದು ಸುದ್ದಿ ಮನಸ್ಸಿಗೆ ಆಘಾತ ಉಂಟು ಮಾಡಿತು. ಆ ಹುಡುಗಿಯ ಕಡೆಯ ಜನ ಈ ಮದುವೆಯನ್ನು ಒಪ್ಪಿ ಕೊಳ್ಳದಿರುವವರು ಒಂದು ಕೆಟ್ಟ ದಿನ ಹುಡುಗನ ಮನೆಗೆ ಹೋಗಿ ಆ ಇಬ್ಬರನ್ನ ಕೊಂದು ಹಾಕಿದರಂತೆ. ಅವರು ಧರ್ಮವನ್ನೋ ಜಾತಿಯನ್ನೋ ಉಳಿಸಿ ಕೊಂಡಿರಬಹುದು. ಆದರೆ ಮನುಷ್ಯತ್ವ ಇಲ್ಲಿ ನಾಶವಾಯಿತಲ್ಲ ಎಂದು ನಾನು ನೊಂದೆ. ಈ ಕಾರಣದಿಂದ ನಾಲ್ಕು ದಿನ ನಾನು ನೆಮ್ಮದಿಯನ್ನ ಕಳೆದುಕೊಂಡೆ. ವಾಕಿಂಗಿಗೆ ಬಂದವ ಆ ಮರದ ಕೆಳಗಿನಿಂದ ಹಾದು ಹೋಗುವಾಗ ನನ್ನ ಹೃದಯ ಭಾರವಾಗುತ್ತಿತ್ತು. ಆದರೂ ನೊಂದ ಮನಸ್ಸಿಗೆ ಸಾಂತ್ವನ ಹೇಳಿಕೊಂಡೆ. ತಿಂಗಳುಗಳು ಉರುಳಿದವು. ಇದೀಗ ಮತ್ತೊಂದು ಮೇ ಬಂದಿದೆ. ಹೌದು ಆ ಮರದಲ್ಲಿ ಎಲೆಗಳು ಉದುರಿವೆ. ಮರ ಹೂವನ್ನ ಅರಳಿಸಲು ತನ್ನ ಸಿದ್ಧತೆ ಮಾಡಿಕೊಂಡಿದೆ. ಇನ್ನು ಕೆಲವೇ ದಿನಗಳಲ್ಲಿ ಮರದಲ್ಲಿ ಗುಲ್ ಮೊಹರ್ ಅರಳುತ್ತದೆ. ಕೆಂಪು ಹೂವು ಹಸಿರು ಹಿನ್ನೆಲೆ.

ನಿತ್ಯ ವಾಯು ವಿಹಾರಕ್ಕೆ ಬಂದ ನಾನು ಆ ಮರದ ಕೆಳಗಿನಿಂದ ಹಾದು ಹೋಗುವಾಗ ಒಂದು ಬಾರಿ ಆ ಮರವನ್ನ ಮುಟ್ಟಿ ನನ್ನ ಕೃತಜ್ಞತೆ ತೋರುತ್ತೇನೆ. ಹಾಗೆಯೇ ಎರಡು ಮೂರು ನಾಲ್ಕನೇ ಸುತ್ತು ಬಂದಾಗ ಆ ಮರದ ಕೆಳಗೆ ಯಾರಾದರೂ ನವ ದಂಪತಿಗಳು ಬಂದು ಕುಳಿತಿದ್ದಾರೆಯೇ ನೋಡುತ್ತೇನೆ. ಹಾಗೆಯೇ ಇಂದಲ್ಲ ನಾಳೆ ಈ ಮರದ ಕೆಳಗೆ ಒಂದು ಹೊಸ ಜೋಡಿ ಬಂದು ಕುಳಿತು ಸರಸ ಸಲ್ಲಾಪದಲ್ಲಿ ಮೈ ಮರೆಯುತ್ತದೆ ಅನ್ನುವ ವಿಶ್ವಾಸ ಕೂಡ ನನಗಿದೆ.

ಮೊನ್ನೆ ಹೀಗೇ ಆಯಿತು. ಎಂದಿನಂತೆ ಐದು ಗಂಟೆಗೆಲ್ಲ ವಾಕಿಂಗ್ ಟ್ರ್ಯಾಕಿಗೆ ಬಂದೆ. ಜನ ಇನ್ನೂ ಬಂದಿರಲಿಲ್ಲ. ನನ್ನ ಪಾಡಿಗೆ ನಾನು ಸಣ್ಣ ದನಿಯಲ್ಲಿ ಯಾವುದೋ ಹಾಡನ್ನ ಗುಣುಗುಣಿಸುತ್ತ ಟ್ರ್ಯಾಕಿನಲ್ಲಿ ಒಂದು ಎರಡು ಮೂರು ಸುತ್ತು ಬಂದೆ. ನಾಲ್ಕನೇ ಸುತ್ತು ಬಂದಾಗ ಆ ಗುಲ್ ಮೊಹರ್ ನ ಕೆಳಗೆ ಕುಳಿತ ಒಂದು ಜೋಡಿಯನ್ನು ಕಂಡೆ. ಹುಡುಗಿ ತಿಳಿ ಹಸಿರು ಸೀರೆಯನ್ನ ಉಟ್ಟಿದ್ದಳು, ಇದರ ಮೇಲೆ ತಿಳಿ ಬಣ್ಣದ ಕೆಂಪು ಹೂವು. ಹುಡುಗ ನೀಲಿ ಬಣ್ಣದ ಸಫಾರಿ ಧರಿಸಿದ್ದ. ಇಬ್ಬರೂ ಪಿಸ ಪಿಸ ಮಾತು ಕಿಸಕಿಸ ನಗೆಯಲ್ಲಿ ತೊಡಗಿದ್ದರು. ನನಗೆ ಥಟ್ಟನೆ ಒಂದು ಬಗೆಯ ಸಂತಸವಾಯಿತು. ಈ ಗುಲ್ ಮೊಹರ್ ಹೀಗೆಯೇ ಅರಳುತ್ತಿರಲಿ ಅಂದುಕೊಂಡು ಐದನೇ ಸುತ್ತಿಗೆ ತೊಡಗಿಕೊಂಡೆ...

## 'ಪ್ರೀತಿ'ಗೆ ಇಂಧನ

'ಹಣ'
ಎನ್ನುವ ಇಂಧನ
ಇಲ್ಲವಾದರೆ
'ಪ್ರೀತಿ'
ಎನ್ನುವ ಬಂಧನ
ಇರುವುದಿಲ್ಲ

★ ಡಿ. ಎಂ. ಹೆಗಡೆ

